# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 03–01–2026** **ಸಮಯ : 2½ ಘಂಟೆ**

**ತರಗತಿ : VII** **ಅಂಕ : 80**

---

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

---

**I. ಆವರಣದಿಂದ ಸೂಕ್ತ ಉತ್ತರ ಆರಿಸಿ ಬರೆಯಿರಿ: 10x1=10**

1. ನಾವು ಏಕೆ ಮತ್ತು ಹೇಗೆ ನೀತಿವಂತರಾಗಿರಬಹುದು ಎಂಬುದನ್ನು __________ ಶಿಕ್ಷಣ ಕಲಿಸುತ್ತದೆ.
   (ಮೌಲ್ಯಶಿಕ್ಷಣ; ಕಾನೂನು ಶಿಕ್ಷಣ; ಮಾನವ ಶಿಕ್ಷಣ)
2. ಯಶಸ್ವಿನ ಮನುಷ್ಯನಾಗಲು ಪ್ರಯತ್ನಿಸಬೇಡ, ಪ್ರತಿಯಾಗಿ ಮೌಲ್ಯದ ಮಾನವನಾಗು________.
   (ಆಲ್ಬರ್ಟ್ ಐನ್‌ಸ್ಟೈನ್; ಅಬ್ರಹಾಂ ಲಿಂಕನ್; ಜಾನ್ ಪೌಲ್)
3. ಮಾನವ ಜೀವಿಗಳು ಸ್ವಾಭಾವಿಕವಾಗಿ ಇತರರ ಬಗ್ಗೆ _________ ಹೊಂದಿದ್ದಾರೆ.
   (ಭಾವನೆಗಳನ್ನು; ಸಮಾಧಾನವನ್ನು; ಅನುಕಂಪವನ್ನು)
4. ಆಳ ಭಾವನೆಗಳುಳ್ಳ ವ್ಯಕ್ತಿ ಮಾತ್ರ ಇತರರ ಭಾವನೆಗಳನ್ನು ___________ ಮಾಡಿಕೊಳ್ಳಬಲ್ಲ.
   (ದ್ವೇಷ; ಅರ್ಥ; ತಿರಸ್ಕಾರ)
5. ಕಾಯಾ, ವಾಚಾ, ಮನಸಾ ಇತರರಿಗೆ ಹಾನಿ ಮಾಡುವವರು ___________ ಜನರು.
   (ಒಳ್ಳೆಯ; ಪ್ರೀತಿಸುವ; ಕೆಟ್ಟ)
6. ಸ್ವಾತಂತ್ರ್ಯ ಆಯ್ಕೆ ಮಾಡುವ ನಮ್ಮ _________ಕ್ಕೆ ಅನ್ವಯಿಸುತ್ತದೆ.
   (ಸಾಮರ್ಥ್ಯ; ಅದೃಷ್ಟ; ದುರ್ಗುಣ)
7. ಬನ್ನಿ ನನ್ನ ___________ ಪಾಲ್ಗೊಳ್ಳಿರಿ.
   (ದುಃಖದಲ್ಲಿ, ಸಂತೋಷದಲ್ಲಿ; ಕಷ್ಟದಲ್ಲಿ)
8. ಪ್ರಾಮಾಣಿಕತೆ ನಮಗೆ ವಿಳಂಬವಾದರೂ ತಕ್ಕ ________ ನೀಡುತ್ತದೆ.
   (ಸಂಭಾವನೆ; ಪ್ರೀತಿಯನ್ನು; ದುಃಖವನ್ನು)
9. ಈ ಲೋಕದಲ್ಲಿ ______________ ಕೊಂಡುಕೊಳ್ಳುವ ವಸ್ತುವಲ್ಲ.
   (ಜ್ಞಾನ; ಸಂತೋಷ; ಅಧಿಕಾರ)
10. ಇತರರನ್ನು ಅರಿತುಕೊಂಡಿರುವವರು ವಿದ್ಯಾವಂತರು. ತಮ್ಮನೆ ಅರಿತು ಕೊಂಡಿರುವರು __________.
    (ದಡ್ಡರು; ಜ್ಞಾನಿಗಳು; ಕೆಲಸಗಾರರು)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿರಿ: 5x1=5**

1. _______ ರಹಿತ ಜೀವನ ನಿರುಪಯುಕ್ತ.
2. ಪ್ರಾಮಾಣಿಕ ವ್ಯಕ್ತಿ ಇತರರ ವಸ್ತುಗಳನ್ನು __________.
3. ಸಂತೋಷ ಅದ್ಭುತ ವಸ್ತು, ನೀನು ಕೊಟ್ಟಷ್ಟು ಅದು ನಿನ್ನಲ್ಲಿ _______ ಆಗುತ್ತದೆ.
4. ಸ್ವಾತಂತ್ರ್ಯ ತನ್ನನ್ನೇ ನಿಯಂತ್ರಿಸಿಕೊಳ್ಳುವ __________.
5. __________ ಮಾನವನ ಘನತೆ ಗೌರವವನ್ನು ಸೂಚಿಸುತ್ತದೆ.

**III. ಹೊಂದಿಸಿ ಬರೆಯಿರಿ: 5x1=5**

1. ಮೆದುಳಿನ ಮೌಲ್ಯ – ಮೌಲ್ಯ ಶಿಕ್ಷಣ ಸರಣಿ
2. ಬಾಳಾ ಜ್ಯೋತಿ – ನಿರ್ಮಲತೆ ಪ್ರಧಾನ
3. ಸಂತೋಷ ಅಂತರಂಗದೊಳಗಿನ – ಕೆಟ್ಟ ಜನರು
4. ದೈವತ್ವದ ನಂತರ – ಸತ್ಯ
5. ಹಾನಿ ಮಾಡುವವರು – ವ್ಯವಹಾರ

**IV. ಈ ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂದು ಬರೆಯಿರಿ: 5x1=5**

1. ಮೌಲ್ಯ ಶಿಕ್ಷಣವು ಒಳ್ಳೆಯ ನಡವಳಿಕಯೆನ್ನು ಕಲಿಸುತ್ತದೆ.
2. ನಾವು ಒಳಿತನ್ನು ಆಯ್ಕೆ ಮಾಡಿದಾಗ ಅದು ನಮ್ಮ ವ್ಯಕ್ತಿತ್ವವನ್ನು ಉನ್ನತಿಗೇರಿಸುತ್ತದೆ.
3. ನಿಸರ್ಗ ಮಾನವ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದಿಲ್ಲ.
4. ಮಾನವ ಜೀವಿಗಳು ಸ್ವಾಭಾವಿಕವಾಗಿ ಇತರರ ಬಗ್ಗೆ ಅನುಕಂಪವನ್ನು ಹೊಂದಿದ್ದಾರೆ.
5. ಅವಕಾಶಗಳನ್ನು ತಪ್ಪಿಸಿಕೊಳ್ಳಬಾರದು.

**V. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ: 5x1=5**

1. ಮೌಲ್ಯ ಎಂಬ ಪದದ ಅರ್ಥವೇನು?
2. ನಿನ್ನ ಪ್ರತಿಭೆಗಳಾವುವು?
3. ಅವಕಾಶವನ್ನು ಕಳೆದುಕೊಂಡಾಗ ನಿನಗೆ ಏನಾಗುತ್ತದೆ?
4. ದೇವತೆ ನಮಗೆ ಯಾವ ನೀತಿಯನ್ನು ಕಲಿಸಿದ್ದಾರೆ?
5. ನೀನು ಮನೆಯಲ್ಲಿ ಸ್ವಾತಂತ್ರ್ಯವನ್ನು ಅನುಭವಿಸುವೆಯಾ?

**VI. ಈ ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ನೀನು ಮೌಲ್ಯ ಶಿಕ್ಷಣ ತರಗತಿಗಳನ್ನು ಮೆಚ್ಚುತ್ತಿಯಾ? ಏಕೆ?
2. ಮಾನವ ಜೀವಿಗಳ ಸ್ವಭಾವವೇನು?
3. ಸ್ವಾತಂತ್ರ್ಯದ ಸಕಾರಾತ್ಮಕ ಪರಿಣಾಮಗಳೇನು?
4. ಪ್ರಾಮಾಣಿಕತೆ ಅಗತ್ಯವೆಂದು ಏಕೆ ಹೇಳುತ್ತಿ?
5. ಮೊದಲನೆ ಸಲ ಮರ ಕಡಿಯುವವನ ಬಗ್ಗೆ ನಿನಗೆ ಅನಿಸಿದ ಅಭಿಪ್ರಾಯವನ್ನು ಬರೆಯಿರಿ.
6. ಸಂತೋಷ ಅಂತರಂಗದೊಳಗಿನ ವ್ಯವಹಾರ ಈ ಹೇಳಿಕೆಯನ್ನು ನಿಮ್ಮ ಪದಗಳಿಂದ ಬರೆಯಿರಿ.
7. ಅವಕಾಶವನ್ನು ಬಳಸಿಕೊಳ್ಳಲು ನಿನಗಿರುವ ಬಹುಮುಖ್ಯ ತೊಡಕು ಯಾವುದು?

**VII. ಈ ಕೆಳಗಿನ ಯಾವುದಾದರೂ ಆರು ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

1. ಮೌಲ್ಯ ಶಿಕ್ಷಣದ ಉದ್ದೇಶಗಳಾವುವು?
2. ಸಂತೋಷದ ಬಗ್ಗೆ 3 ಚಿಂತನೆಗಳನ್ನು ಬರೆಯಿರಿ.
3. ನೈರ್ಮಲ್ಯದ ಸಕಾರಾತ್ಮಕ ಪರಿಣಾಮಗಳು ಯಾವುವು?
4. ಶುದ್ದತೆಯನ್ನೂ ಕಾಪಾಡುವುದು ಎಂದರೆ ಏನು?
5. ಸಮಾಜ ಕಲ್ಯಾಣವನ್ನು ವರ್ಧಿಸುವ 3 ಸದ್ಗುಣಗಳನ್ನು ಬರೆ?
6. ಇತರರಿಗೆ ಒಳಿತನ್ನು ಮಾಡಲು ನಿನ್ನನ್ನು ಪ್ರೇರೇಪಿಸುವುದೇನು?
7. "ಒಬ್ಬನು ಮನಸ್ಸಿಗೆ ಬಂದಂತೆ ಮಾಡುವುದೇ ಸ್ವಾತಂತ್ರ್ಯ" ಈ ಹೇಳಿಕೆ ನಿನಗೆ ಒಪ್ಪಿಗೆಯೇ? ಹೇಗೆ?
8. ಒಂದು ಸ್ವಂತ ಪ್ರಾರ್ಥನೆಯನ್ನು ಬರೆ.

**VIII. ಈ ಕೆಳಗಿನ ಎರಡು ವಿಷಯಗಳ ಕುರಿತು ಟಿಪ್ಪಣಿ ಬರೆಯಿರಿ: 2x5=10**

1. ನನ್ನ ಸ್ವಾತಂತ್ರ್ಯ
2. ಪ್ರಾಮಾಣಿಕತೆ
3. ನನ್ನ ಗುಣಲಕ್ಷಣಗಳು
4. ಮೌಲ್ಯಶಿಕ್ಷಣ

**IX. ಟಿಪ್ಪಣಿ ಓದಿ ಪ್ರಶ್ನೆಗಳನ್ನು ಉತ್ತರಿಸಿರಿ:** **2x6=12**

1. ಸೀಮಾ ಮತ್ತು ಸುಮಾ ಇಬ್ಬರು ಸಹೋದರಿಯರು. ಒಂದೇ ಶಾಲೆಗೆ ಹೋಗುತ್ತಾರೆ. ಶಾಲೆಯಿಂದ ಮನೆಗೆ ಬಂದ ತಕ್ಷಣ ಸೀಮಾ ತನ್ನ ಶಾಲೆಯ ಮನೆ ಕೆಲಸಗಳನ್ನು ಮಾಡಿ ಮುಗಿಸುತ್ತಾಳೆ ಹಾಗೂ ತನ್ನ ತಾಯಿಯ ಜೊತೆ ಕೆಲಸಗಳಲ್ಲಿ ಭಾಗಿಯಾಗುತ್ತಾಳೆ. ಆದರೆ ಸುಮಾ ಹಾಗಲ್ಲ, ಚೀಲವನ್ನು ಬಿಸಾಡಿ ಆಟವಾಡಲು ಪ್ರಾರಂಭಿಸುತ್ತಾಳೆ. ಧಾರಾವಾಹಿ ಮತ್ತು ಮೊಬೈಲ್ ವೀಕ್ಷಣೆಯಲ್ಲಿ ಕಾಲವನ್ನು ಕಳೆಯುತ್ತಾಳೆ. ಹೆತ್ತವರ ಜೊತೆ ಜಗಳವಾಡಲು ಹಿಂಜರಿಯುವುದಿಲ್ಲ.

   **a. i) ಸೀಮಾ ಮತ್ತು ಸುಮಾ ಇವರಲ್ಲಿ ಯಾರ ಸ್ವಭಾವ ನಿನಗೆ ಇಷ್ಟವಾಯಿತು?**

   **ii) ಯಾಕೆ?**

   **b. i) ಮಕ್ಕಳು ಮನೆಯಲ್ಲಿ ಮಾಡಬಹುದಾದ ಕೆಲಸಗಳು ಯಾವುವು?**

   **ii) ನೀನು ಮನೆಯಲ್ಲಿ ದಿನನಿತ್ಯ ಮಾಡುವ ಕೆಲಸ ಯಾವುದು?**

   **c) ತಂದೆ ತಾಯಿಯವರೊಂದಿಗೆ ಮಕ್ಕಳು ಹೇಗಿರಬೇಕು?**

2. ದೀಕ್ಷಿತ್ 7ನೇ ತರಗತಿ ವಿದ್ಯಾರ್ಥಿ. ಅವನು ತುಂಬಾ ಬುದ್ಧಿವಂತ. ಅವನು ಶಾಲೆಗೆ ಬರಲು ಸರ್ಕಾರಿ ಬಸ್ಸನ್ನು ಬಳಸುತ್ತಿದ್ದನು. ಒಂದು ದಿನ ಬಸ್ಸಿನಲ್ಲಿ ಬರುವಾಗ ಅಲ್ಲಿ ಬಿದ್ದಿರುವ ನೂರು ರೂಪಾಯಿಯ ನೋಟುಗಳ ಒಂದು ಕಟ್ಟು ಅವನಿಗೆ ಸಿಕ್ಕಿತು. ಇದನ್ನು ತನ್ನಲ್ಲಿಯೇ ಉಳಿಸಿಕೊಂಡು ಖರ್ಚು ಮಾಡೋಣ ಎಂದು ಯೋಚಿಸಿದನು. ಆದರೆ ಅವನ ಮನಸಾಕ್ಷಿ ಇದನ್ನು ಒಪ್ಪಲಿಲ್ಲ. ಆಲೋಚನೆ ಮಾಡಿ ಆ ಹಣವನ್ನು ಕಂಡಕ್ಟರ್ ಬಳಿ ಕೊಟ್ಟು ಶಾಲೆಯ ಕಡೆಗೆ ಹೆಜ್ಜೆ ಹಾಕಿದನು.

   **a. i) ದೀಕ್ಷಿತ್‌ನ ಸ್ವಭಾವ ನಿನಗೆ ಇಷ್ಟವಾಯಿತಾ?**

   **ii) ಯಾಕೆ?**

   **b. i) ಹಣದ ಕಟ್ಟನ್ನು ನೋಡಿದಾಗ ಅವನಿಗೆ ಏನು ಅನಿಸಿತು?**

   **ii) ಅವನ ನಡವಳಿಕೆಯಿಂದ ತಿಳಿಯಬೇಕಾದ ಪಾಠ ಏನು?**

   **c) ದೀಕ್ಷಿತ್‌ನ ಸ್ಥಳದಲ್ಲಿ ನೀನು ಇರುತ್ತಿದ್ದರೆ ಏನು ಮಾಡುತ್ತಿದ್ದಿ?**